

# ಮಣ್ಣಿನ ಗೋಡೆಗಳು

■ ಕಣಾದ ರಾಘವ
ಕಲೆ: ವಿಶ್ವನಾಥ ಎ.ಎಸ್.

ಜೀವನದಲ್ಲಿಯೇ ಮೊಟ್ಟಮೊದಲ ಬಾರಿಗೆ ಇಂಥದ್ದೊಂದು ವಿಸ್ಮಯಕಾರಿ ವಸ್ತುವನ್ನು ತಾನು ನೋಡುತ್ತಿರುವುದೇನೋ ಎಂಬಂಥ ಅಚ್ಚರಿ ಮತ್ತು ಪರಮಕುತೂಹಲಕಾರಿ ಚರ್ಯೆಯನ್ನು ಮುಖದ ಮೇಲೆ ಹೊತ್ತುಕೊಂಡು ಎಂಬತ್ತಾರರ ಸಿಂಗ್ ಸಾಹೇಬರು ತಮ್ಮ ಅಸಿಸ್ಟೆಂಟ್ ಯೂರಿ ತಂದು ಮೇಜಿನ ಮೇಲಿಟ್ಟ ಆ ನೀಲನಕ್ಷೆಯನ್ನು ಸುಮಾರು ಹೊತ್ತು ನೋಡುತ್ತಲಿದ್ದರು. ನೂರಾಎಂಬತ್ತು ಎಕರೆ ವಿಸ್ತೀರ್ಣದ ಆ ಅಪಾರ್ಟ್‌ಮೆಂಟ್ ಹೋಮ್ಸ್ ಪ್ರಾಜೆಕ್ಟಿನಲ್ಲಿ ಮುಂದೆಂದೋ ಬಂದು ವಾಸವಾಗಿರಬಹುದಾದ ನಾನೂರ ಐವತ್ತು ಕುಟುಂಬಗಳ ಸೌಖ್ಯದ ಬಗ್ಗೆ ಮತ್ತು ಜೊತೆಗೆ ತಮ್ಮ ಕಂಪನಿಯು ಈ ಪ್ರಾಜೆಕ್ಟಿನಿಂದ ಗಳಿಸುವ ಲಾಭದ ಬಗ್ಗೆ ಮತ್ತು ಆ ಲಾಭದಲ್ಲಿ ಮಾಡಬಹುದಾದ ಉಳಿದ ಪ್ರಾಜೆಕ್ಟಿನ ಬಗ್ಗೆ ಆಲೋಚಿಸುತ್ತ ಆ ನಕ್ಷೆಯ ಇಂಚಿಂಚನ್ನೇ ನೋಡುತ್ತ ಹೋದ ಸಿಂಗ್ ಸಾಹೇಬರಿಗೆ ಆ ದಿನ ಬೆಳಿಗ್ಗೆ ತಾನು ವಿಟಮಿನ್ ಬಿ 12 ನ ಮಾತ್ರೆಯನ್ನು ತೆಗೆದುಕೊಳ್ಳದೇ ಇದ್ದದ್ದು ರಪಕ್ಕನೆ ನೆನಪಾಯಿತು.

ಸಿಂಗ್ ಸಾಹೇಬರ ಮರೆಯುವ ಪ್ರಕ್ರಿಯೆಯು ಇತೀಚೆಗೆ ವ್ಯಾಪಕವಾಗಿ ತಲೆಯಿಂದ ಕಾಲಿನವರೆಗೆ ಹರಡಲು ಶುರುವಾಗತೊಡಗಿ ಒಂದೆರಡು ವರ್ಷಗಳಾಗುತ್ತ ಬಂದಿದ್ದವು. ಮಗಳು ಅಶ್ವಿನಿ, ಮೊಮ್ಮಗಳು ಉತ್ತರಾ ತನ್ನ ಈ ಮರೆವಿನ ಸಮಸ್ಯೆಯನ್ನು ಮರೆವಿನ ಕಾಯಿಲೆ ಎಂದು ಪರಿಗಣಿಸುವುದಕ್ಕೆ ಮತ್ತು ಅಂಥದ್ದೊಂದು ಇಲ್ಲದಿರುವ ಖಾಯಲೆಯ ಬಗ್ಗೆ ಅಗತ್ಯಕ್ಕಿಂತ ಹೆಚ್ಚಾಗಿ ಇತ್ತೀಚೆಗೆ ತಲೆಕೆಡಿಸಿಕೊಳ್ಳುತ್ತಿರುವುದಕ್ಕೆ ತನ್ನ ಮರೆವು ಕಾರಣವೋ ಅಥವಾ ಮರೆವಿನ ಕಾಯಿಲೆಯನ್ನು ಕಂಡುಹಿಡಿದ ಅಲ್ಜೈಮರ್ ಕಾರಣನೋ ಎಂಬ ವಿಚಾರ ಅವರ ತಲೆಯನ್ನು ಕೊರೆಯುತ್ತಿರುವಾಗಲೇ ತಾನು ಮಾತ್ರೆ ತೆಗೆದುಕೊಳ್ಳದಿದ್ದುದು ಮಗಳಿಗೇನಾದರೂ ಗೊತ್ತಾದರೆ ಕೂಡಲೇ ಆಫೀಸಿಗೆ ಓಡಿ ಬರುತ್ತಾಳೆ ಎಂಬ ಯಾತನಾಕಾರಕ ಅರಿವು ಸಿಂಗ್ ಸಾಹೇಬರನ್ನು ಆವರಿಸಿಕೊಳ್ಳುವಾಗ ಸಣ್ಣಗೆ ಶುರುವಾದ ಆಂಕ್ಸೈಟಿಗೆ ನಡುಗಲು ಶುರುವಿಟ್ಟ ಬೆರಳುಗಳಿಂದ ಸಿಂಗ್ ಸಾಹೇಬರು ಅಸಿಸ್ಟೆಂಟ್ ಯೂರಿಯನ್ನು ಕರೆಯುವ ಸ್ವಿಚ್ಚನ್ನು ಒತ್ತಿದರು. ಈಗಲೂ ಪಕ್ಕದ ಹತ್ತಾರು ಕೋಣೆಗಳಿಗೆ ಕೇಳಿಸುವ, ಮುಂಚೆ ಇವರಿಗೂ ಕೇಳಿಸುತ್ತಿದ್ದ ಪಕ್ಕದ ಕೋಣೆಯ ಯೂರಿಯ ಆಫೀಸಿನಲ್ಲಿ ಇವರು ಒತ್ತಿದ ಸ್ವಿಚ್ಚು ಮಾಡುವ ಆರ್ಭಟವು ಇತ್ತೀಚೆಗೆ ಇವರಿಗೆ ಕೇಳಿಸುತ್ತಿರಲಿಲ್ಲ. ಮತ್ತು ಅದೇ ಕಾರಣದಿಂದ ಆ ಘಂಟೆ ಅತ್ತ ಸೈಲೆಂಟಾಗಿ ಬಾರಿಸುತ್ತಿದೆಯೇನೋ ಎಂಬುದು ಸಿಂಗ್ ಸಾಹೇಬರ ಸುಪ್ತಮನಸ್ಸಿಗೆ ಮತ್ತ್ಯಾವುದೋ ಒಂದು ಕಲ್ಪನೆಗೆ ಆಯಾಮವನ್ನು ಸೃಷ್ಟಿಸುತ್ತಿತ್ತು. ಹಾಗೆ ಅತ್ತ ಇವರು ಒತ್ತಿದ ಸ್ವಿಚ್ಚಿನ ಘಂಟೆಯು ಸದ್ದು ಮಾಡಿದ ಕೂಡಲೇ ಮಾರುತ್ತರದಲ್ಲಿ ಅಲೆಕ್ಸಾಳ ಅಕ್ಕಳನ್ನೂ ಮೀರಿಸುವ ವೇಗದಲ್ಲಿ 'ನಾಕ್ ನಾಕ್ ಸರ್' ಎನ್ನುತ್ತ ಯೂರಿಯು ಸಿಂಗ್ ಸಾಹೇಬರ ಕೋಣೆಯ ಒಳಬರುವ ಹೊತ್ತಿಗೆ ಸರಿಯಾಗಿ ಅವರ ಫೋನಿನ ವಾಟ್ಸ್ಆ್ಯಪ್ ಟಣ್ ಎಂದಿತು. ಅದುವರೆಗಿದ್ದ ಎಲ್ಲ ಆತಂಕವೂ ಆ ಒಂದು ವಾಟ್ಸ್ಆ್ಯಪ್ ಪಿಂಗಿಗೆ ಅವರ ಮನೋವಲಯದಿಂದ ದೂರವಾದ ಭಾಸದಲ್ಲಿ ಸಿಂಗ್ ಸಾಹೇಬರು ಸ್ಲೋ ಮೋಶನ್ನಿನಲ್ಲಿ ವಾಟ್ಸ್ಆ್ಯಪ್ ತೆರೆದು ನೋಡಿದರೆ ಕ್ಯಾಲಿಫೋರ್ನಿಯಾದ ಗೆಳೆಯನೊಬ್ಬನಿಂದ ಬಂದ ಆ ಮೆಸೇಜಿನಲ್ಲಿ ಅಮೆರಿಕದ ಪ್ರೆಸಿಡೆಂಟ್ ಕ್ಯಾಂಡಿಡೇಟು, ತುಲಸಿ ಗಬ್ಬಾರ್ಡ್ ನ್ಯೂಯಾರ್ಕಿನ ಇಸ್ಕಾನ್ ಮಂದಿರದಲ್ಲಿ ಹಾರ್ಮೋನಿಯಮ್ ಹಿಡಿದು 'ಹರ್‍ರೆ ಕ್ರಿಸ್ಸನ್ನಾ ಹರ್‍ರೆ ಕ್ರಿಸ್ಸನ್ನಾ' ಎನ್ನುತ್ತ ನೂರಾರು ಭಕ್ತರನ್ನು ರಂಜಿಸುತ್ತ ಅಮೆರಿಕದ ಭಕ್ತಿಮೂಲ ಸ್ತೋತ್ರವಾದ ಕೀರ್ತನೆಯಲ್ಲಿ ತೊಡಗಿದ್ದಳು. ಅವಳ ಕೀರ್ತನೆಯ ಲಯವು ಅದೆಷ್ಟು ಭರ್ಜರಿಯಾಗಿತ್ತೆಂದರೆ ಅವಳು ಬಲಗೈಯಲ್ಲಿ ಹಿಡಿದ ಹಾರ್ಮೋನಿಯಮ್ಮಿನ ನಾಲ್ಕು ಬೆರಳುಗಳ ಕಾರ್ಡೂ ಮತ್ತು ಎಡಗೈಯ ಬಾತೆಯ ಬಾಗಿಲೂ ಹರೇ ಕ್ರಿಷ್ಣನ ಒಂದೊಂದು ಅಕ್ಷರಕ್ಕೂ ಅಪ್ಪಳಿಸಿಕೊಳ್ಳುತ್ತ ಏಕಾಕ್ಷರೀ ಪಂಥದತ್ತ ಹೊರಳುತ್ತಿದ್ದವು. ಆ ವಿಡಿಯೊವನ್ನು ನೋಡುತ್ತ